ಈ) ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಹಾಲಿ ಆರು ವಿದ್ಯುತ್ ವಿತರಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಉ) ಶ್ರೀನಿವಾಸಪುರ ಪಟ್ಟಣದಲ್ಲಿ ಹಾಲಿ ಒಂದು ವಿದ್ಯುತ್ ವಿತರಣಾ ಕೇಂದ್ರವಿರುತ್ತದೆ. ರಾಯಲ್ಪಾಡು ಮತ್ತು ಗೌನಪಲ್ಲಿ ಪ್ರದೇಶಗಳಲ್ಲಿ ಉಂಟಾಗಿರುವ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಗಮನಕ್ಕೆ ಬಂದಿರುತ್ತದೆ.

ಊ) ರಾಯಲ್ಪಾಡು ಮತ್ತು ಗೌನಿಪಲ್ಲಿ ಗಳಲ್ಲಿ ಹೊಸ ವಿದ್ಯುತ್ ವಿತರಣಾ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಗಳನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ರೂಪಿಸುತ್ತಿದೆ.

1509 (2079) ಶ್ರೀ ರಮೇಶ್ ಕುಮಾರ್ ಕೆ.ಆರ್ (ಶ್ರೀನಿವಾಸಪುರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಎಷ್ಟು ಕಡೆ ಗ್ರಾಮ ವಾಸ್ತವ್ಯ ಮಾಡಿದ್ದರು ಹಾಗೂ ಈ ಕಾರ್ಯಕ್ರಮಕ್ಕಾಗಿ ಖರ್ಚಾದ ಒಟ್ಟು ಹಣ ಎಷ್ಟು;

ಆ) ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ನೇತೃತ್ವದ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರ ಜಾರಿಗೆ ತಂದಿದೆಯೇ;

ಇ) ಹಾಗಿಲ್ಲದಿದ್ದಲ್ಲಿ ಜಾರಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಮಾನ್ಯ ಮುಖ್ಯಮಂತ್ರಿಗಳು ಗ್ರಾಮ ವಾಸ್ತವ್ಯ ಹೂಡಿದ ಬಗ್ಗೆ ಮಾಹಿತಿಯನ್ನು ಅನುಬಂಧದಲ್ಲಿ ಕೊಡಲಾಗಿದೆ. ಗ್ರಾಮ ವಾಸ್ತವ್ಯ ಕಾರ್ಯಕ್ರಮ ಮುಖ್ಯಮಂತ್ರಿಯವರ ಸಾಮಾನ್ಯ ಪ್ರವಾಸ ಕಾರ್ಯಕ್ರಮದ ಒಂದು ಭಾಗವಾದ ಕಾರಣ ಈ ಬಾಬ್ತಿಗಾಗಿ ಯಾವುದೇ ಹೆಚ್ಚುವರಿ ವೆಚ್ಚ ಆಗುವುದಿಲ್ಲ.

ಆ) ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ನೇತೃತ್ವದ ಆಡಳಿತ ಸುಧಾರಣಾ ಆಯೋಗವು ಮುಖ್ಯವಾಗಿ ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಿದ್ದು ಅವುಗಳ ಅನುಷ್ಠಾನಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಸರಿಗಾತ್ರದ ಕ್ರಮಗಳು (Right Sizing Measures)

2. ಆರ್ಥಿಕ ಮಿತವ್ಯಯದ ಕ್ರಮಗಳು :

3. ಆಡಳಿತಾತ್ಮಕ ಕ್ರಮಗಳು :

4. ವೃತ್ತಿಯ ಆಯ್ಕೆಯ ಅವಕಾಶಗಳು :

5. ಇ– ಆಡಳಿತ

6. ಪ್ರಕಾರ್ಯಗಳ ಪುನರಾವಲೋಕನ ನಡೆಸಿದ 13 ಇಲಾಖೆಗಳಿಗೆ ಸಂಬಂಧಿಸಿದಂತೆ ಆಯೋಗವು 305 ಶಿಫಾರಸ್ಸುಗಳನ್ನು ಮಾಡಿದ್ದು ಅವುಗಳಲ್ಲಿ 80 ಶಿಫಾರಸ್ಸುಗಳನ್ನು ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ. ಹಾಗೂ ಬಾಕಿ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಸಂಬಂಧಿಸಿದ ಇಲಾಖೆಗಳು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

7. ಸಣ್ಣ ಯೋಜನೆಗಳನ್ನು ವಿಲೀನಗೊಳಿಸುವುದು :

8. ಬೇರೆಯವರಿಗೆ ವಹಿಸುವ ಕ್ಷೇತ್ರಗಳನ್ನು (Out Sourcing) ಗುರುತಿಸುವುದು.

ಇದುವರೆವಿಗೆ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ

- ಅನೇಕ ಇಲಾಖೆಗಳಲ್ಲಿ ವಿಭಾಗಾಧಿಕಾರಿಗಳ ಹುದ್ದೆ ಮತ್ತು ಕಛೇರಿಗಳನ್ನು ರದ್ದುಗೊಳಿಸುವುದು.
- ಸಚಿವಾಲಯದಲ್ಲಿ ಪೀಠಾಧಿಕಾರಿ ಪದ್ಧತಿ, ಹಂತ ಜಿಗಿಯುವಿಕೆ, ಹಾಗೂ ಏಕ ಕಡತ ಪದ್ಧತಿಯನ್ನು ಜಾರಿಗೆ ತರಲಾಗಿದೆ.
- ವರ್ಗಾವಣೆ ನಿಯಮಗಳನ್ನು ಜಾರಿಗೊಳಿಸಲಾಗಿದೆ.

- ಇಲಾಖೆಗಳಲ್ಲಿ ಹೆಚ್ಚುವರಿ ಹುದ್ದೆಗಳನ್ನು ಗುರುತಿಸಿ ಅವುಗಳನ್ನು ಕಡಿತಗೊಳಿಸಲು ವಿಶೇಷ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಹೆಚ್ಚುವರಿ ಸಿಬ್ಬಂದಿಯನ್ನು ಮರು ನೇಮಕಾತಿ ಮಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೇವಾ ನಿಯಮಗಳು ವಿಭಾಗದಲ್ಲಿ ಮರು ನೇಮಕಾತಿ ಕೋಶವನ್ನು ರಚಿಸಲಾಗಿದೆ:
- ವಾಹನ ಚಾಲಕರ ಮತ್ತು ಡಿ ವರ್ಗದ ನೌಕರರುಗಳ ಸೇವೆಯನ್ನು ಹೊರ ಗುತ್ತಿಗೆ ಮುಖಾಂತರ ಪಡೆಯಲು ಎಲ್ಲಾ ಇಲಾಖೆಗಳಿಗೆ ಸೂಚಿಸಲಾಗಿದೆ.
- ಇ-ಆಡಳಿತ ಕ್ರಮಗಳನ್ನು ಜಾರಿಗೊಳಿಸಲಾಗಿದೆ.

ಇ) (ಅ) ದ ಉತ್ತರದಿಂದ ಉದ್ಭವಿಸುವುದಿಲ್ಲ.

1511 (1368) ಶ್ರೀ ರೋಷನ್ ಬೇಗ್ ಆರ್. (ಜಯಮಹಲ್) :- ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜವಾಹರಲಾಲ್ ನೆಹರು ನ್ಯಾಷನಲ್ ಅರ್ಬನ್ ರಿನ್ಯೂವಲ್ ಮಿಷಿನ್ ವತಿಯಿಂದ ಸುಮಾರು 7 ಕೋಟಿ ರೂ.ಗಳ ವೆಚ್ಚದಲ್ಲಿ ಇತಿಹಾಸ ಪ್ರಸಿದ್ಧವಾದ ಮೈಸೂರಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳಾದ ಅರಮನೆ ಇತ್ಯಾದಿಗಳ ಮೂಲ ಶಿಲ್ಪಕಲೆಯನ್ನು ಕಾಪಾಡಲು ಕಾರ್ಯಕ್ರಮ ಹಮ್ಮಿಕೊಂಡಿರುವುದು ನಿಜವೇ;

ಆ) ಇದರ ಸಂಬಂಧದಲ್ಲಿ ಕನ್ಸಲ್‌ಟೆಂಟ್‌ರವರನ್ನು ನೇಮಿಸಲಾಗಿದೆಯೇ;

ಇ) ನೇಮಿಸಿದ್ದಲ್ಲಿ ಅವರು ವರದಿಯನ್ನು ಸಲ್ಲಿಸಿರುವರೇ;

ಈ) ಮೈಸೂರು ಮತ್ತು ಚಾಮುಂಡೇಶ್ವರಿ ಬೆಟ್ಟದಲ್ಲಿರುವ ಪುರಾತನ ಇತಿಹಾಸ ಸ್ಮಾರಕಗಳನ್ನು ಸಂರಕ್ಷಿಸಲು ಕೈಗೊಂಡ ಕ್ರಮವೇನು?